೫೪೩. ಶ್ರೀ ಮಾಲಿಕಯ್ಯ ಗುತ್ತೇದಾರ್ (ಆಫಜಲಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ.

(ಅ) ಆಫಜಲಪುರ ತಾಲ್ಲೂಕಿನ ಉಡಚಾಣ ದೇ. ಗಾಣಗಾಪುರ ಮತ್ತು ಬಳೂರ್ಗಿ ಗ್ರಾಮಗಳಿಗೆ ಹಾಲಿ ಇರುವ ಕುಡಿಯುವ ನೀರಿನ ತೊಂದರೆಯ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಸದರೀ ಗ್ರಾಮಗಳಿಗೆ ಕುಡಿಯಲಿಕ್ಕೆ ನೀರನ್ನು ಸರಬರಾಜು ಮಾಡಲು ಸರ್ಕಾರದವರು ತ್ವರಿತ ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಬಂದಿದೆ.

(ಆ) ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಾಲೀಕಯ್ಯ ಗುತ್ತೇದಾರ್.—ನಮ್ಮ ಕ್ಷೇತ್ರದಲ್ಲಿ ಪ್ರಸಿದ್ಧವಾದ ಗಾಣಗಾಪುರ ದೇವಸ್ಥಾನ ವಿರುವುದರಿಂದ ಯಾತ್ರಿಕರು ಅಲ್ಲಿಗೆ ಬರುವುದು ಜಾಸ್ತಿಯಾಗಿದೆ. ಆ ಪಟ್ಟಣ ಕೂಡ ಸಾಕಷ್ಟು ವಿಸ್ತಾರವಾಗಿರುವುದರಿಂದ ನೀರಿನ ತೊಂದರೆ ಜಾಸ್ತಿ ಇದೆ. ಹಿಂದಿನ ಅಧಿವೇಶನದಲ್ಲಿಯೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾಗ, ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದರು. ಆದರೂ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಕೂಡಲೇ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣ ಒದಗಿಸಿ ಕ್ರಮಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಆ ಊರಿನ ಕುಡಿಯುವ ನೀರಿನ ಯೋಜನೆ ಬಗ್ಗೆ ಕ್ರಮ ಕೈಗೊಂಡು ಆಗ್ಮೆಂಟೇಷನ್ ಸ್ಕೀಮಿನಲ್ಲಿ ಆರೂವರೆ ಲಕ್ಷ ರೂಪಾಯಿಗಳ ಯೋಜನೆ ತಯಾರಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಆದ್ಯತೆ ಮೇರೆಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮೂರನೆ ಪಟ್ಟಿಯಿಂದ ಮುಂದೂಡಲಾದ ೪೯ (೯೦)ನೇ ಪ್ರಶ್ನೆ.

ಶ್ರೀ ಬಿ. ಎಚ್. ಯಂಕಾನಾಯಕ್‌ರವರು.

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳ ಕರಡು ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಯಿತು.

ಕ್ಯೊಯಿಲ ಪಶುಸಂಗೋಪನಾ ಕೇಂದ್ರದ ಅಭಿವೃದ್ಧಿ

೫೫೮. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಪಶುವೈದ್ಯ ಹಾಗೂ ಪಶುಸಂಗೋಪನಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡದ ಕ್ಯೊಯಿಲಾದಲ್ಲಿ ೩೦ ವರ್ಷಗಳಿಂದ ಇರುವ ಪಶುಸಂಗೋಪನಾ ಕೇಂದ್ರ ಲಾಭದಾಯಕ ಸ್ಥಿತಿಯಲ್ಲಿದೆಯೇ ?

(ಆ) ಮೇಲ್ಕಂಡ ಕೇಂದ್ರದಲ್ಲಿರುವ ಹಸು, ಎಮ್ಮೆ, ಕೋಳಿ ಮತ್ತು ಹಂದಿಗಳ ಸಂಖ್ಯೆಯೆಷ್ಟು ?

(ಇ) ಇಲ್ಲಿನ ಹಾಲಿನ ಉತ್ಪತ್ತಿ ಸಮಾಧಾನಕರವಾಗಿದೆಯೇ ಹಾಗೂ ಜಿಲ್ಲೆಗೆ ಸಾಕಾಗುತ್ತಿದೆಯೇ?

(ಈ) ಈ ಕೇಂದ್ರದ ಅಭಿವೃದ್ಧಿ ಆಗದೆ ಇದ್ದಲ್ಲಿ ಅದಕ್ಕೆ ಕಾರಣಗಳೇನು ?